# ಮರಗಳ ಮನುಷ್ಯ



■ ಪ್ರವೀಣ ಕುಲಕರ್ಣಿ

'ವೃಕ್ಷೋ ರಕ್ಷತಿ ರಕ್ಷಿತಃ' ಎಂಬ ಬರಹದ ಚಕ್ರದಲ್ಲಿ ಮುಖವನ್ನು ತೂರಿಸಿಕೊಂಡು ಶರ್ಟಿನ ಜೇಬುಗಳಲ್ಲಿ ಬೀಜ ತುಂಬಿಸಿಕೊಂಡು, ಮೊಪೆಡ್ ಗಾಡಿಯಲ್ಲಿ ಜಾಗ ಸಿಕ್ಕಲ್ಲೆಲ್ಲ ಸಸಿಗಳನ್ನು ಇಟ್ಟುಕೊಂಡು ಈ ತಾತ ಹೊರಟರೆಂದರೆ ಯಾವುದೋ ಒಂದು ಬರಡು ಭೂಮಿ ಹಸಿರು ಹೊದಿಕೆ ಪಡೆಯಲಿಕ್ಕಿದೆ ಎಂದೇ ಅರ್ಥ. ಹೀಗೆ ಈ ತಾತ ಬೀಜ ಊರೋಕೆ, ಸಸಿ ನೆಡೋಕೆ ಊರೂರು ಸುತ್ತಿದ್ದು ಒಂದೆರಡು ವರ್ಷಗಳ ತನಕ ಅಲ್ಲ, ಬರೋಬ್ಬರಿ ಆರು ದಶಕಗಳವರೆಗೆ. ಅವರ ಈ ಮರ ಬೆಳೆಸುವ ಕಾಯಕಕ್ಕೆ ಪೂರ್ಣವಿರಾಮ ಬಿದ್ದಿದ್ದು ಇತ್ತೀಚೆಗೆ ಅವರು ಕಣ್ಮುಚ್ಚಿ ಮರಗಳ ರೂಪದಲ್ಲಿ ಅಮರರಾದಾಗಲಷ್ಟೆ.

ತೆಲಂಗಾಣದ ಕಮ್ಮಂ ಜಿಲ್ಲೆಯ ದರಿಪಲ್ಲಿ ರಾಮಯ್ಯ ತಮ್ಮ ಸುತ್ತಲಿನ ಪರಿಸರದಲ್ಲಿ 'ಚೆಟ್ಲ ರಾಮಯ್ಯ' (ಮರಗಳ ರಾಮಯ್ಯ) ಎಂದೇ ಪ್ರಸಿದ್ಧವಾದವರು. ಅವರು ಹೇಗೆ ಮತ್ತು ಯಾವಾಗ ಬೀಜ ಊರುವ, ಸಸಿ ನೆಡುವ ಕೆಲಸ ಮಾಡಿದರು ಎಂಬುದರ ಚಾರಿತ್ರಿಕ ದಾಖಲೆಗಳೇನೂ ಇಲ್ಲ. ಆದರೆ, ಕಮ್ಮಂ ಜಿಲ್ಲೆಯ ಯಾವ ಮೂಲೆಗೆ ಹೋದರೂ ಅಲ್ಲಿ ಬೆಳೆದು ನಿಂತಿರುವ ಮರ–ಗಿಡಗಳು ರಾಮಯ್ಯ ಅವರ ಹೆಸರನ್ನೇ ಉಸುರುತ್ತಿವೆ. ರಾಮಯ್ಯ ಅವರು ಚಿಕ್ಕವರಿದ್ದಾಗ ಅವರ ಅಮ್ಮ ಬೀಜಗಳನ್ನು ಆಯ್ದುತಂದು, ಊರಿ ಸಸಿ ಬೆಳೆಸುವುದನ್ನು ನೋಡುತ್ತಿದ್ದರಂತೆ. 'ಅಮ್ಮನೊಂದಿಗೆ ನಾನೂ ಮರಗಳ ಆರಾಧಕನಾಗಿ ಹೋಗಿದ್ದೆ' ಎಂದು ಅವರು ಹೇಳುತ್ತಿದ್ದರು. 'ಬೀಜದಲ್ಲಿ ಅದೆಂತಹ ಅದ್ಭುತ ಶಕ್ತಿ ಅಡಗಿದೆ ನೋಡಿ. ಅದರಲ್ಲಿ ಜೀವವಿದೆ. ಮಳೆಗಾಲದಲ್ಲಿ ಅದು ಮಣ್ಣಿನೊಂದಿಗೆ ಬೆರೆತರೆ ಅದ್ಭುತವಾದ ಜೀವ ವಿಕಾಸವಾಗುತ್ತದೆ. ಪ್ರಕೃತಿ ನಮಗೆ ಕೊಟ್ಟಿರುವ ವರ ಇದು' ಎಂದು ಹೋದಲ್ಲೆಲ್ಲ ಹೇಳುತ್ತಿದ್ದರು.

ರಾಮಯ್ಯ ಅವರ ಮೊಪೆಡ್ ಗಾಡಿ ಜಿಲ್ಲೆಯಲ್ಲಿ ಎಲ್ಲೆಲ್ಲಿ ಬಂಜರು ಭೂಮಿ, ಬೋರಲು ಗುಡ್ಡಗಳಿವೆಯೋ ಅಲ್ಲೆಲ್ಲ ಹೋಗಿದೆ. ಬೀಜ, ಸಸಿಗಳನ್ನು ನೆಟ್ಟು, ಅವುಗಳು ಬೆಳೆದು ಮರಗಳಾಗುವಂತೆ ನೋಡಿಕೊಂಡಿದ್ದಾರೆ ಈ ಮರಗಳ ಮನುಷ್ಯ. ಒಂದು ಕೋಟಿಗೂ ಅಧಿಕ ಸಸಿಗಳನ್ನು ನೆಟ್ಟು ಬೆಳೆಸಿ, ಅವುಗಳು ಮರಗಳಾಗುವಂತೆ ನೋಡಿಕೊಂಡ ಹೆಮ್ಮೆಯ ಪುರುಷ ರಾಮಯ್ಯ ಎಂದು ಕಮ್ಮಂ ಜಿಲ್ಲೆಯ ಜನ ಅವರನ್ನು ಕೊಂಡಾಡುತ್ತಾರೆ.

ಇಷ್ಟೊಂದು ಸಸಿಗಳನ್ನು ಬೆಳೆಸಿ, ಗಿಡ–ಮರಗಳಾಗುವಂತೆ ಮಾಡಿದ್ದೀರಲ್ಲ? ನಿಮಗೆ ಸಿಕ್ಕಿದ್ದೇನು ಎಂದು ರಾಮಯ್ಯನವರನ್ನು ಕೇಳಿದವರುಂಟು. ಅದಕ್ಕೆ 'ಮರಗಳ ಮನುಷ್ಯ'ನ ಉತ್ತರ ನೇರ ಮತ್ತು ಸರಳವಾಗಿರುತ್ತಿತ್ತು. 'ಆತ್ಮತೃಪ್ತಿ ಸಿಕ್ಕಿದೆ ಅಣ್ಣಾ. ಭೂಮಿಗೆ ಇಷ್ಟೊಂದು ಹಸಿರು ಹೊದಿಕೆ ಹೊದಿಸುವುದಕ್ಕಿಂತ ಬೇರೆ ಆನಂದ ಇನ್ನೇನಿದೆ? ನೀವೆಲ್ಲ ಉಸಿರಾಡುತ್ತಿರುವ ಈ ಸ್ವಚ್ಛ ಗಾಳಿಯನ್ನು ಅದೇ ಮರಗಳು ಕೊಡುತ್ತಿವೆ, ಗೊತ್ತಾ' ಎಂದು ಅವರು ಪ್ರಶ್ನಿಸಿದವರನ್ನೇ ಕೇಳುತ್ತಿದ್ದರು. ದಶಕಗಳ ಹಿಂದೆ ರಾಮಯ್ಯ ಅವರು ಸೈಕಲ್ ತುಳಿದುಕೊಂಡು ಬೀಜ ನೆಡಲು ಹೋಗುತ್ತಿದ್ದರು. ಆರು ದಶಕಗಳಲ್ಲಿ ಅವರು ಬೀಜ ನೆಡುವುದಕ್ಕೆ ಹೋಗದಿರುವ ದಿನಗಳು ಎಲ್ಲೋ ಬೆರಳೆಣಿಕೆಯಷ್ಟು ಮಾತ್ರ. 'ದೇವರಲ್ಲಿ ಪ್ರಾರ್ಥಿಸಲಾಗಲಿ, ಸಸಿ ನೆಡುವುದರಲ್ಲಾಗಲಿ ಪರ್ಯಾಯಗಳೇ ಇಲ್ಲ. ಅದನ್ನು ನೀವೇ ಮಾಡಬೇಕು' ಎಂದೆನ್ನುತ್ತಿದ್ದ ರಾಮಯ್ಯ, ಯಾವುದೇ ಮರವನ್ನು ತೋರಿಸಿದರೂ ಗುರ್ತಿಸುವಷ್ಟು ಚಾಕಚಕ್ಯತೆಯನ್ನು ಹೊಂದಿದ್ದರು. ಬಿಲ್ವ, ಬೇವು, ರಕ್ತಚಂದನ, ಹೊಂಗೆ, ಮಾವು, ಆಲ, ಕದಂಬ... ಹೀಗೆ ವಿಧ ವಿಧವಾದ ಪ್ರಭೇದಗಳ ಮರಗಳ ರಾಶಿಯನ್ನೇ ಅವರು ಬೆಳೆಸಿದ್ದಾರೆ.

ಓದಿದ್ದು ಅತ್ಯಲ್ಪವಾದರೂ ಮರಗಳ ಜಗತ್ತಿನ ಕುರಿತು ಅಪಾರ ಜ್ಞಾನವನ್ನು ಅವರು ಸಂಪಾದಿಸಿದ್ದರು. ಗ್ರಂಥಾಲಯಗಳಿಗೆ ತೆರಳಿ ಮರಗಳ ಕುರಿತ ಪುಸ್ತಕಗಳನ್ನು ತಂದು ಅವರು ಅಧ್ಯಯನ ಮಾಡುತ್ತಿದ್ದರು. ದೇವಾಲಯಗಳ ಪ್ರಾಂಗಣದಲ್ಲೂ ಸಸಿ ನೆಟ್ಟು ಬೆಳೆಸಿದ್ದರು. ಯಾರೇ ಆಗಲಿ, ರಾಮಯ್ಯ ಅವರ ಊರಿಗೆ ಭೇಟಿ ನೀಡಿದರೂ ಅವರಿಂದ ಸಸಿ ನೆಡಿಸುತ್ತಿದ್ದರು. ಗಿಡಗಳನ್ನು ಬೆಳೆಸುತ್ತಲೇ ತಮ್ಮ ಜ್ಞಾನವನ್ನು ವೃದ್ಧಿಸಿಕೊಂಡ ಈ ಮರಗಳ ಮನುಷ್ಯ, ನುರಿತ ಸಸ್ಯ ವಿಜ್ಞಾನಿಯಂತೆ ಯಾವ ಕಾಲದಲ್ಲಿ ಯಾವ ಸಸ್ಯಗಳ ಬೀಜವನ್ನು ಹೇಗೆ ಸಂಗ್ರಹಿಸಬೇಕು, ಅದನ್ನು ಬೀಜೋಪಚಾರ ಮಾಡಿ ಹೇಗೆ ನೆಡಬೇಕು ಎನ್ನುವುದನ್ನು ಅರಿತಿದ್ದರು. ಅವರು ಬೆಳೆಸಿದ ಗಿಡಗಳೂ ಬೆಳೆದು ವೃಕ್ಷಗಳಾದಂತೆ ಅವರ ಜ್ಞಾನವೂ, ಪರಿಸರಪ್ರೇಮವೂ ವೃಕ್ಷವಾಯಿತು.

ಮರಗಳ ಪ್ರೀತಿ ಬೆಳೆಸಿಕೊಳ್ಳುವಂತಹ ಘೋಷಣೆಗಳನ್ನು ಗೋಡೆಗಳ ಮೇಲೆ ಬರೆಯುವ ಕೆಲಸವನ್ನೂ ಅವರು ಮಾಡುತ್ತಿದ್ದರು. ಪೇಂಟ್ ಡಬ್ಬಿ ಹಿಡಿದುಕೊಂಡು ಅವರು ಊರೂರು ಸುತ್ತುತ್ತಿದ್ದರು. ಪರಿಸರ ಜಾಗೃತಿಯ ಘೋಷಣೆ ಇರುವ ಚಕ್ರದಲ್ಲಿ ಮುಖ ತೂರಿಸಿ ಅವರು ಪ್ರಶ್ನಿಸುತ್ತಿದ್ದರು, 'ವಿಶ್ವ ಸುಂದರಿಗಿಂತ ಚೆನ್ನಾಗಿ ಕಾಣುತ್ತಿದ್ದೇನೆ, ಅಲ್ಲವೇ' ಎಂದು. 'ಹೌದು ಕಣಪ್ಪ ಇದೇ ನನ್ನ ಚಹರೆ, ಗುರುತು' ಎಂದು ಎದುರಿಗಿದ್ದವರಿಗೆ ಹೇಳುತ್ತಿದ್ದರು. 'ನಮ್ಮ ರಾಮಯ್ಯ ಕಿರೀಟ ಧರಿಸದ ಪರಿಸರದ ರಾಜ' ಎಂದು ಕಮ್ಮಂ ಜನ ಹೇಳುತ್ತಿದ್ದರು. ರಾಮಯ್ಯ ಅವರು ಬೆಳೆಸಿದ ರಕ್ತಚಂದನ ಮರಗಳನ್ನು ಕಂಡಿದ್ದ ಅವರ ಸಂಬಂಧಿಯೊಬ್ಬರು, 'ಈ ಮರಗಳನ್ನು ಮಾರಿದರೆ ಕೋಟ್ಯಂತರ ರೂಪಾಯಿ ಬರುತ್ತದೆ. ಮಾರಾಟ ಮಾಡು' ಎಂದು ಸಲಹೆ ನೀಡಿದ್ದರು. 'ಒಂದೇ ಒಂದು ಮರ ಕಡಿಯುವುದಕ್ಕೂ ಆಸ್ಪದ ನೀಡಲಾರೆ' ಎಂದು ರಾಮಯ್ಯ ಮಾರುತ್ತರ ನೀಡಿದ್ದರು. ಈ ಮರಗಳ ಮನುಷ್ಯನಿಗೆ ಪದ್ಮ ಪ್ರಶಸ್ತಿಯೂ ಸಂದಿದೆ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65